ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಮಡಿಕೇರಿ

ಸಿ.ಸಿ.ಸಂಖ್ಯೆ:2657/2025

ಪಿರ್ಯಾದಿಃ ರಾಜ್ಯದ ಪರವಾಗಿ
ಮಡಿಕೇರಿ ಗ್ರಾಮಾಂತರ ಆರಕ್ಷಕ ಠಾಣೆ

ವಿರುದ್ಧ

ಆರೋಪಿ/ಗಳುಃ ವಿಕ್ರಮ್ ಬಿ.ಕೆ ಯಾನೆ ವಿನು

**ದೋಷಾರೋಪಣೆ**

ಶ್ರೀಮತಿ ವಿನುತ ಡಿ.ಎಸ್. ಬಿ.ಎಸ್.ಸಿ. (ಸೆರಿಕಲ್ಚರ್), ಎಲ್.ಎಲ್.ಬಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ ಆದ ನಾನು ಆರೋಪಿಯಾದ

ವಿಕ್ರಮ್ ಬಿ.ಕೆ ಯಾನೆ ವಿನು,
ಪ್ರಾಯ 31 ವರ್ಷ,
ತಂದೆಃ ಕೃಷ್ಣಪ್ಪ ಬಿ.ಯು.,
ವಾಸಃ ಶ್ರೀ ಗುರುನಾರಾಯಣ ಬಡಾವಣೆ,
ಕಟ್ಟೆಮಾಡು ಗ್ರಾಮ,
ಮಡಿಕೇರಿ.

ನಿಮ್ಮ ವಿರುದ್ಧ ರೂಪಿಸಿರುವ ದೋಷಾರೋಪಣೆ ಏನೆಂದರೆ,

ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಕಟ್ಟೆಮಾಡು ಗ್ರಾಮದಲ್ಲಿ ಆರೋಪಿಯಾದ ನೀವು ವಾಸಮಾಡಿಕೊಂಡಿದ್ದು, ಮಡಿಕೇರಿಯಲ್ಲಿರುವ "ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಲಿಮಿಟೆಡ್" ಸಂಸ್ಥೆಯಲ್ಲಿ ವಾಹನಗಳಿಗೆ ವಿಮೆ ಪಾಲಿಸಿ ಮಾಡಿಸುವ ಏಜೆಂಟ್ ಆಗಿ ಕೆಲಸಮಾಡಿಕೊಂಡಿದ್ದು, ಆರೋಪಿಯಾದ ನೀವು ಚಾಸಾ-2 ಜನಾರ್ಧನ ರವರ ಕೆಎ-12-ಎಂಎ-7692 ನೋಂದಣಿ ಸಂಖ್ಯೆಯ ಕಾರಿಗೆ ರೂ.6,200/- ಹಣ ಪಡೆದು ದಿನಾಂಕಃ05-02-2022 ರಿಂದ ದಿನಾಂಕಃ04-02-2023 ವರೆಗೆ ಹಾಗೂ ಕೆಎ-12-ಎನ್-7385 ನೋಂದಣಿ ಸಂಖ್ಯೆಯ ಮಾರುತಿ ಓಮಿನಿ ವ್ಯಾನ್ ಗೆ ರೂ.4,500/- ಹಣ ಪಡೆದು

Scanned with OKEN Scanner

ದಿನಾಂಕಃ28-02-2023 ರಿಂದ ದಿನಾಂಕಃ 27-02-2024 ವರೆಗೆ ವಿಮಾ ಪಾಲಿಸಿ ಮಾಡಿರುವುದಾಗಿ ಆರೋಪಿಯಾದ ನೀವು ಚಾಸಾ-2 ರವರಿಗೆ ವಿಮಾ ಪಾಲಿಸಿ ಪತ್ರಗಳನ್ನು ನೀಡಿದ್ದು, ಆರೋಪಿಯಾದ ನೀವು ಚಾಸಾ-2 ರವರಿಂದ ಒಟ್ಟು ರೂ. 10,700/- ಹಣ ಪಡೆದಿದ್ದು, ನಂತರ ಚಾಸಾ-2 ರವರು ಮಡಿಕೇರಿಯ "ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಲಿಮಿಟೆಡ್" ಸಂಸ್ಥೆಯ ಕಛೇರಿಯಲ್ಲಿ ಆರೋಪಿಯಾದ ನೀವು ನೀಡಿದ ವಿಮಾ ಪಾಲಿಸಿ ಪತ್ರಗಳನ್ನು ಪರಿಶೀಲಿಸಿದಾಗ, ಚಾಸಾ-2 ರವರ ಬಾಪ್ತು ಮೇಲ್ಕಂಡ ವಾಹನಗಳಿಗೆ ನಕಲಿ ವಿಮಾ ಪಾಲಿಸಿಗಳನ್ನು ನೀಡಿ, ಚಾಸಾ-2 ಹಾಗೂ "ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಲಿಮಿಟೆಡ್" ಸಂಸ್ಥೆಗೆ ವಂಚನೆ ಮಾಡಿದ್ದು, ಆ ಮೂಲಕ ಕಲಂ 420 ಭಾ.ದಂ.ಸಂ. ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಆಪಾದನೆಯು ಆರೋಪಿಯಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ **21.11.2025**

ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆ.ಎಮ್.ಎಫ್.ಸಿ., ಮಡಿಕೇರಿ.

Scanned with OKEN Scanner